# ಔಷಧೀಯ ಬಿಲ್ವಪತ್ರೆ





ಬಿಲ್ವಪತ್ರೆ ಮುಳ್ಳುಗಳಿಂದ ಕೂಡಿದ ಮಧ್ಯಮ ಗಾತ್ರದ ಮರ. ಇದು ಎಲ್ಲಾ ಕಡೆ ಬೆಳೆಯುತ್ತದೆ. ಬಿಲ್ವದ ಬೇರು, ತೊಗಟೆ, ಎಲೆ, ಹಣ್ಣು ಮತ್ತು ಬೀಜ ಎಲ್ಲವೂ ಔಷಧೀಯ ಗುಣ ಹೊಂದಿದೆ.

ಶಿವನನ್ನು ಪೂಜಿಸಲು ಬಿಲ್ವಪತ್ರೆಯು ಎಲ್ಲಕ್ಕಿಂತ ಶ್ರೇಷ್ಠ ಎಂಬ ನಂಬಿಕೆ ಇದೆ. ಶಿವನ ದೇವಾಲಯ ಇರುವ ಕಡೆಗಳಲ್ಲಿ ಬಿಲ್ವದ ಮರ ಇದ್ದೇ ಇರುತ್ತದೆ. ಇದರ ತೊಗಟೆ ಒರಟಾಗಿರುತ್ತದೆ. ಎಲೆ ಮೂರು ಕವಲುಗಳನ್ನು ಹೊಂದಿದ್ದು ಪರಿಮಳಯುಕ್ತವಾಗಿದೆ. ವರ್ಷಪೂರ್ತಿ ಹಣ್ಣು ಬಿಡುತ್ತದೆ. ಇದರ ಕಾಯಿ ದುಂಡಗಿದ್ದು ಹಸಿರು ಬಣ್ಣದಿಂದ ಕೂಡಿರುತ್ತದೆ. ಕಾಯಿಯ ಮೇಲಿರುವ ಸಿಪ್ಪೆ ಗಟ್ಟಿಯಾಗಿರುತ್ತದೆ. ಹಣ್ಣಾದಾಗ ಹಳದಿ ಬಣ್ಣಕ್ಕೆ ಬರುತ್ತದೆ. ಹಣ್ಣಿನ ತಿರುಳು ತಿಳಿಯಾದ ಕೇಸರಿ ಬಣ್ಣದಿಂದ ಕೂಡಿದ್ದು ಸಿಹಿಯಾಗಿರುತ್ತದೆ. ಹಣ್ಣಿನೊಳಗೆ ಅನೇಕ ಬೀಜಗಳಿರುತ್ತವೆ. ಬೀಜಗಳ ಮೇಲೆ ಮೃದು ರೋಮಗಳ ಮೇಲ್ಮೈ ಇರುತ್ತದೆ.

ಬಿಲ್ವಪತ್ರೆಯ ವೈಜ್ಞಾನಿಕ ಹೆಸರು ಏಗೆಲ್ ಮರ್ಮಲೋಸ್. ಇದು ರುಟಾಸೀ ಕುಟುಂಬಕ್ಕೆ ಸೇರಿದೆ. ಬಿಲ್ವದ ಬೇರು, ತೊಗಟೆ, ಎಲೆ, ಹಣ್ಣು ಮತ್ತು ಬೀಜ ಎಲ್ಲವೂ ಔಷಧೀಯ ಗುಣ ಹೊಂದಿರುವುದು ವಿಶೇಷ.

## ಔಷಧೀಯ ಗುಣಗಳು

ಬಿಲ್ವಪತ್ರೆ ಹಣ್ಣನ್ನು ಒಲೆಯ ಕೆಂಡದಲ್ಲಿ ಹಾಕಿ ಬಿಸಿ ಮಾಡಿ ಒಡೆದು ಅದರ ತಿರುಳನ್ನು ತಲೆಗೆ ಚೆನ್ನಾಗಿ ಹಚ್ಚಿ ಅರ್ಧ ಗಂಟೆಯ ನಂತರ ಸ್ನಾನ ಮಾಡುವುದರಿಂದ ತಲೆ ಹೊಟ್ಟು ನಿವಾರಣೆಯಾಗುತ್ತದೆ.

ಬಿಲ್ವದ ಹಣ್ಣಿನ ತಿರುಳನ್ನು ನೀರಿನಲ್ಲಿ ಕದಡಿ ನಂತರ ಸೋಸಿ ಅದಕ್ಕೆ ತಕ್ಕಷ್ಟು ಸಕ್ಕರೆಯನ್ನು ಹಾಕಿ ಜ್ಯೂಸ್ ಮಾಡಿ ಕುಡಿಯುವುದರಿಂದ ಉರಿಮೂತ್ರ ಶಮನವಾಗುತ್ತದೆ. ಮಲಬದ್ಧತೆ ನಿವಾರಣೆಯಾಗುತ್ತದೆ. ಇದು ಬೇಸಿಗೆಯಲ್ಲಿ ಕುಡಿಯಲು ಉತ್ತಮವಾದ ಪಾನೀಯ.

ಬಿಲ್ವ ಪತ್ರೆ ಎಲೆಯ ರಸವನ್ನು ಕೊಬ್ಬರಿ ಎಣ್ಣೆಯಲ್ಲಿ ಕುದಿಸಿ ಆರಿದ ನಂತರ ಶೇಖರಿಸಿ ಇಟ್ಟುಕೊಂಡು ಕಿವಿಗೆ ಬಿಡುವುದರಿಂದ ಕಿವಿ ಸೋರುವುದು ಮತ್ತು ಕಿವಿನೋವು ಕಡಿಮೆಯಾಗುತ್ತದೆ.

ಬಿಲ್ವಪತ್ರೆ ಮರದ ಬೇರನ್ನು ಗೋಮೂತ್ರದಲ್ಲಿ ತೇದು ಲೇಪಿಸುವುದರಿಂದ ಹುಳಕಡ್ಡಿ ವಾಸಿಯಾಗುತ್ತದೆ. ಪ್ರತಿ ದಿನ ಬೆಳಿಗ್ಗೆ 2–3 ಚಮಚದಷ್ಟು ಬಿಲ್ವ ಪತ್ರೆಯ ರಸ ಸೇಸಿದರೆ ಮಧು ಮೇಹ, ಮೂತ್ರ ದೋಷಗಳು ನಿವಾರಣೆಯಾಗುತ್ತದೆ.

ಬಿಲ್ವಪತ್ರೆ ಎಲೆಗಳನ್ನು ಚೆನ್ನಾಗಿ ಜಜ್ಜಿ, ಸೋಸಿ ತೆಗೆದ ಒಂದು ಚಮಚ ರಸಕ್ಕೆ ಸ್ವಲ್ಪ ನೀರು ಸೇರಿಸಿ ಸೇವಿಸುವುದರಿಂದ ಕಫದ ಬಾಧೆ ಕಡಿಮೆ ಆಗುತ್ತದೆ. ಎದೆಯಲ್ಲಿ ಕಫ ಕಟ್ಟಿ ಬಾಧಿಸುತ್ತಿದ್ದರೆ ಬಿಲ್ವಪತ್ರೆಯ ಎಲೆಗಳನ್ನು ನುಣ್ಣಗೆ ಅರೆದು ಎದೆಗೆ ಲೇಪಿಸುವುದರಿಂದ ಕಫ ಕರಗುತ್ತದೆ. ವ್ರಣಗಳಾಗಿದ್ದಲ್ಲಿ ಬಿಲ್ವಪತ್ರೆಯ ಬೇರನ್ನು ಅರಸಿನದೊಂದಿಗೆ ಎಳ್ಳೆಣ್ಣೆಯಲ್ಲಿ ಅರೆದು ಲೇಪಿಸಬೇಕು.

ಬಿಲ್ವಪತ್ರೆ ಎಲೆಯ ರಸವನ್ನು ಬೆಳಿಗ್ಗೆ ಹಾಗೂ ರಾತ್ರಿ ನಾಲ್ಕು ಚಮಚದಷ್ಟು ಕುಡಿದರೆ ಕಾಮಾಲೆ ಪರಿಹಾರವಾಗುವುದು.

ಚಿತ್ರ - ಬರಹ:
**ಸಹನಾ ಕಾಂತಬೈಲು**